ಮಿಸ್.ನಂ.5/2022

ಪಿ.ಡಬ್ಲೂಃ 1- ಕೃಷ್ಣಪ್ಪ ಬಿನ್ ಮುನಿಗುರಪ್ಪ

ದಿನಾಂಕಃ 05/08/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು 1 , 2 ಮತ್ತು 5 ರಿಂದ 8 ನೇ ಎದುರುದಾರರ ಪರವಾಗಿ ಶ್ರೀ ಎಂ.ಎಸ್.ಬಿ. ವಕೀಲರಿಂದ**

1. ಅಸಲು ದಾವೆ ನಂ.2/2008 ರ ಪುನರ್ ಸ್ಥಾಪನೆಗಾಗಿ ನಾನು ಈ ಪ್ರಕರಣ ದಾಖಲಿಸಿರುತ್ತೇನೆ. ಸದರಿ ಅಸಲು ದಾವೆಯನ್ನು 2008 ರಲ್ಲಿ ದಾಖಲಿಸಲಾಗಿತ್ತು. ನನಗೆ ಸದರಿ ದಾವೆಯ ಸಮನ್ಸ್ ಜಾರಿಯಾಗಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನಾವು ಯಾರೂ ಹಾಜರಾಗುವುದು ಬೇಡ ಮತ್ತು ಅವರೇ ವಕೀಲರನ್ನು ನೇಮಕ ಮಾಡಿ ದಾವೆ ನೋಡಿಕೊಳ್ಳುತ್ತಾರೆ ಎಂದು 1 ನೇ ಎದುರುದಾರರು ನಮಗೆ ಹೇಳಿದ್ದಕ್ಕೆ ನಾವು ಸದರಿ ದಾವೆಯಲ್ಲಿ ಹಾಜರಾಗಿರುವುದಿಲ್ಲ. ನಾನು ಸದರಿ ದಾವೆಯಲ್ಲಿ ಶ್ರೀ ರಾಮ್ ಗೋಪಾಲ ಎಂಬ ವಕೀಲರ ಮೂಲಕ ಹಾಜರಾಗಿ ಲಿಖಿತ ಹೇಳಿಕೆ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ವಾದಿಯರ ಮತ್ತು ಪ್ರತಿವಾದಿಯರ ವಿಚಾರಣೆ ನಡೆಯಿತು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆ ಎಷ್ಟು ವರ್ಷಗಳ ಕಾಲ ನಡೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಪ್ರಸ್ತುತ ದಾವಾ ಸ್ವತ್ತಿಗೆ ಸಂಬಂಧಿಸಿ ಎಫ್.ಡಿ.ಪಿ.ನಂ.**5/2022** ನಡೆದಿರುತ್ತದೆ ಎಂದರೆ ಸರಿ. ಅದೇ ರೀತಿ ಪ್ರಸ್ತುತ ದಾವಾ ಸ್ವತ್ತಿಗೆ ಸಂಬಂಧಿಸಿ ಲಕ್ಷ್ಮಯ್ಯ ಎಂಬುವವರು ದಾಖಲಿಸಿದ ಅಸಲು ದಾವೆ ನಂ.**63/2023** ಇದೇ ನ್ಯಾಯಾಲಯದಲ್ಲಿ ನಡೆದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್ (ಸಂಚಾರಿ ಪೀಠ ಬಂಗಾರಪೇಟೆ).